ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಹಾಗೂ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಚಿಕ್ಕಮಗಳೂರು.

ದಿನಾಂಕಃ 04/06/2025

ಸಿ.ಸಿ.ನಂ.67/2021

ಪಿರ್ಯಾದುದಾರರು ಃ ಉಷ ಕೋಂ ನರೇಂದ್ರ ಕುಮಾರ್
39 ವರ್ಷ , ವಿಜಯಪುರ, ಚಿಕ್ಕಮಗಳೂರು .

ವಿರುದ್ಧ

ಆರೋಪಿತರು ಃ ಹರೀಶ್ ಕುಮಾರ್ ಬಿನ್ ಬಸಪ್ಪ ,
40 ವರ್ಷ , ವ್ಯಾಪಾರಿ ,
ಟಿ.ಕೆ. ಲೇ ಔಟ್ ಮೈಸೂರು .

<u>ಆರೋಪಣೆ</u>

ಆರೋಪಿತರಾದ ನೀವು ಮತ್ತು ಫಿರ್ಯಾದುದಾರರು ಸ್ನೇಹಿತರಾಗಿದ್ದು ಆರೋಪಿತರಾದ ನೀವು ಫಿರ್ಯಾದುದಾರರಿಂದ ರೂ.20,00,000 ಗಳನ್ನು ವ್ಯಾಪಾರದ ಸಲುವಾಗಿ ಸಾಲವಾಗಿ ಪಡೆದುಕೊಂಡಿದ್ದು, ಸದರಿ ಮೊತ್ತಕ್ಕೆ ನೀವು ಶೇಕಡಾ 5 ರಷ್ಟು ಲಾಭಾಂಶವನ್ನು ನೀಡುವುದಾಗಿ ಒಪ್ಪಿಕೊಂಡಿದ್ದು , ನಂತರ ನೀವು ಸದರಿ ಮೊತ್ತವನ್ನು ಹಿಂದಿರುಗಿಸಲು ಮುಂದೆ ಬಾರದ್ದರಿಂದ , ನಿಮ್ಮ ಮೇಲೆ ಫಿರ್ಯಾದುದಾರರು ಪೋಲೀಸ್ ವರಿಷ್ಠಾಧಿಕಾರಿ, ಚಿಕ್ಕಮಗಳೂರು ರವರಿಗೆ ದೂರನ್ನು ಸಲ್ಲಿಸಿದಾಗ , ನೀವು ಸದರಿಯವರ ಮುಂದೆ ಹಾಜರಾಗಿ ರೂ. 20 ಲಕ್ಷ ಹಣವನ್ನು ಸಮವಾಗಿ ಎರಡು ಕಂತಿನಲ್ಲಿ ಆಗಸ್ಟ್ 2018 ಮತ್ತು ಡಿಸೆಂಬರ್ 2018 ರಲ್ಲಿ ಕೊಡುವುದಾಗಿ ಒಪ್ಪಿಕೊಂಡು ರೂ.10 ಲಕ್ಷ ಮೊತ್ತದ ಎರಡು ಚೆಕ್ಕುಗಳನ್ನು ಫಿರ್ಯಾದುದಾರರಿಗೆ ಸಾಲದ ಹಣದ ಮರುಪಾವತಿಗಾಗಿ ಕೊಟ್ಟಿದ್ದು , ಸದರಿ ಎರಡು ಚೆಕ್ಕುಗಳಲ್ಲಿ ಮೊದಲನೇ ಚೆಕ್ಕನ್ನು ದಿನಾಂಕ 29.08.2018 ರ ಸಿಂಡಿಕೇಟ್ ಬ್ಯಾಂಕ್ ನ ಚೆಕ್ ಸಂಖ್ಯೆ 471111 ನ್ನು ರೂಃ10,00,000 ಗಳಿಗೆ ಫಿರ್ಯಾದುದಾರರಿಗೆ ಕೊಟ್ಟಿದ್ದು , ಸದರಿ ಚೆಕ್ಕನ್ನು ನಗದೀಕರಿಸುವ ಸಲುವಾಗಿ ಪಿರ್ಯಾದುದಾರರು ತಮ್ಮ ಬ್ಯಾಂಕ್ ನಲ್ಲಿ ಹಾಜರುಪಡಿಸಿದಾಗ ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲ ಎಂಬ ಕಾರಣಕ್ಕಾಗಿ ಚೆಕ್ಕು ವಾಪಾಸ್ಸು ಬಂದಿದ್ದು , ಸದರಿ ವಿಷಯವನ್ನು

ನಿಮಗೆ ನೋಟೀಸು ನೀಡಿ ತಿಳಿಸಿದ್ದು ಸದರಿ ನೋಟೀಸು "addressee left" ಎಂಬ ಹಿಂಬರಹದೊಂದಿಗೆ ವಾಪಾಸ್ಸು ಬಂದಿದ್ದು, ನೀವು ಪಿರ್ಯಾದುದಾರರಿಗೆ ಚೆಕ್ಕಿನ ಮೊತ್ತವನ್ನು ಕೊಟ್ಟಿರುವುದಿಲ್ಲ . ಅದ್ದರಿಂದ ಆರೋಪಿಯಾದ ನೀವು ವರ್ಗಾವಣೆಯ ಲಿಖಿತಗಳ ಅಧಿನಿಯಮ ಕಲಂ 138 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರಿ ಎಂದು ನಿಮ್ಮ ವಿರುದ್ಧ ಈ ಆರೋಪಣೆ ಹೊರಿಸಲಾಗಿದೆ.

1. ಈಗ ಓದಿ ಹೇಳಿದ ಆರೋಪಣೆ ನಿಮಗೆ ಅರ್ಥವಾಯಿತೇ?

ಉತ್ತರಃ 1. ಹೌದು

2. ಮೇಲಿನ ಆಪಾದನೆಯನ್ನು ಒಪ್ಪಿಕೊಳ್ಳುತ್ತೀರೋ ಅಥವಾ ನಿಮಗೆ ಏನಾದರೂ ಪ್ರತಿರಕ್ಷೆ ಇದೆಯೇ?

ಉತ್ತರಃ 1. ಇಲ್ಲ

ಮೇಲಿನ ಆರೋಪಣೆಯನ್ನು ಆರೋಪಿಗೆ ಓದಿ, ವಿವರಿಸಿ ಅವರು ಕೊಟ್ಟ ಉತ್ತರವನ್ನು ನಾನೇ ಸ್ವತಃ ಕೇಳಿ ಬರೆದುಕೊಂಡಿರುವುದು ನಿಜವಾಗಿದೆ ಎಂದು ದೃಢೀಕರಿಸುತ್ತೇನೆ.

ಸಹಿ

(ಕುಮಾರಿ ಸುಜಾತ )

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಸಿ.ಜೆ.ಎಂ., ಚಿಕ್ಕಮಗಳೂರು.